ಕಳೆದುಕೊಂಡು ಅನ್ನುವಂತೆ ಕೇಳಿಸಿಕೊಂಡಿದ್ದಳು ಶುಭದಾ. ಪ್ರಾಯ ತುಂಬಿ ತುಳುಕುವ ಹುಮ್ಮಸ್ಸಿನ ಯುವತಿಗೆ ಅತ್ತೆ ನಡೆದುಕೊಂಡ ರೀತಿಯಲ್ಲಿ ತಪ್ಪೇನೂ ಕಾಣಿಸದೆ ಬದಲಿಗೆ ಅವಳ ಧೈರ್ಯಕ್ಕೆ ಮೈ ಜುಮುಜುಮುಗುಟ್ಟಿತ್ತು. ಪ್ರೀತಿ ಹೇಡಿಗಳಿಗಲ್ಲ, ಪ್ರೀತಿಸಿದ ಮೇಲೆ ಅದಕ್ಕೆ ನ್ಯಾಯ ಒದಗಿಸಲು ಗಟ್ಟಿ ಗುಂಡಿಗೆ ಬೇಕು ಅನಿಸಿತ್ತು. ಅದೂ ಈ ಕಾಲದ ಕತೆಯಲ್ಲ. ಮೂವತ್ತು ವರ್ಷಗಳಷ್ಟು ಹಿಂದೆ ನಡೆದಿದ್ದು. ಈಗಿನ ಕಾಲವಾಗಿದ್ದರೆ ಅರೆಮನಸ್ಸಿನಿಂದಲಾದರೂ ಮನೆಯವರು ಒಪ್ಪಿ, ಅಥವಾ ಮನುಷ್ಯರ ಮನಸ್ಸು ಯಾವ್ಯಾವ ಥರದಲ್ಲಿ ಯೋಚಿಸುತ್ತದೆಯೆಂದು ಯಾರಿಗೆ ಗೊತ್ತಿರುತ್ತದೆ? ಈ ಕಾಲದಲ್ಲೂ ಮರ್ಯಾದಾಹತ್ಯೆಗಳಿಗೆ ಬರವೇ? ಬೇಕಾದಷ್ಟು ಕಡೆ ನಡೆದಿವೆ, ನಡೆಯುತ್ತಲೂ ಇವೆ. ಅತ್ತೆಗೆ ಒರಗಿ ಕೂತು ಗತಕಾಲದಲ್ಲಿ ಕಳೆದುಹೋದವಳಂತೆ ಅವಳ ಕತೆಗೆ ಕಿವಿಯಾಗಿದ್ದ ಹುಡುಗಿ ಕಾವೇರಿ ನಡೆದಿದ್ದರ ಒಂದು ಸಂಕ್ಷಿಪ್ತ ವಿವರಣೆಯನ್ನು ಆಪ್ತವಾಗಿ ತೆರೆದಿಡುತ್ತಿದ್ದಂತೆ ಮೂಕವಿಸ್ಮಿತಳಾಗಿದ್ದಳು.

"ಈಗ ಹೇಳು, ಈ ಅತ್ತೆ ಯಾವನ ಹಿಂದೇನೋ ಓಡಿಹೋದೋಳು ಅಂತ ಈಗ್ಲೂ ಅನಿಸುತ್ತಾ ನಿಂಗೆ? ಈ ಅತ್ತೇನ ನೋಡಿದ್ರೆ ಅಸಹ್ಯ ಅನ್ಸುತ್ತಾ?"

ಶುಭದಾ ಕೈಯೆತ್ತಿ ಅತ್ತೆಯ ಬಾಯಿ ಮುಚ್ಚಿದ್ದಳು.

"ನಿನ್ಮೇಲೆ ನಂಗಿರೋ ಪ್ರೀತಿ ಮತ್ತಷ್ಟು ಜಾಸ್ತಿಯಾಗ್ತಿದೆ ಅತ್ತೆ. ಒಬ್ರನ್ನ ಪ್ರೀತಿಸಿ, ಮತ್ತೊಬ್ರನ್ನ ಮದುವೆಯಾಗೋ ನಾಟಕ ಮಾಡೋಕೆ ಹೋಗ್ಲಿಲ್ಲ ನೀನು. ನಿನ್ನ ಆತ್ಮಸಾಕ್ಷಿಗೆ ತಕ್ಕ ಹಾಗೆ ನಡ್ಕೊಂಡಿದ್ದಿ. ಮನೆಯೋರೇ ನೋಡಿ ಮದುವೆ ಮಾಡಿದ್ರೂ ಹಿಂಗಾಗ್ತಿರ್ಲಿಲ್ಲ ಅಂತ ಏನು ಗ್ಯಾರಂಟಿ? ಅಲ್ವಾ?"

ಹೂಂಗುಟ್ಟಿದಳು ಕಾವೇರಿ. ಆದರೆ ಒಳಮನಸ್ಸು ಈ ಮಾತನ್ನು ಪೂರಾ ಒಪ್ಪಿರಲಿಲ್ಲ. ಮನೆಯವರು ನೋಡಿ ಮದುವೆ ಮಾಡಿದ್ದರೆ 'ಹುಲ್ಲು, ನೀರು ಇರೋ ಕಡೆ ನೋಡಿ ಹಸು ಕಟ್ಟಿದಂತೆ' ಅನ್ನುವ ಅವರ ನಂಬಿಕೆಯ ಪ್ರಕಾರ ಇದ್ದುಳ್ಳವರ ಮನೆಗೆ ಕೊಡುತ್ತಿದ್ದರೇ ವಿನಾ... ಆಗಲಾದರೂ ಏನಾಗುತ್ತಿತ್ತು? ಕೈಯಲ್ಲಿ ಕಾಸಿಗೆ ಗತಿಯಿಲ್ಲದೆ ಅನುಭವಿಸುತ್ತಿರುವುದನ್ನು ಕಾಸಿದ್ದೂ ಅನುಭವಿಸಬೇಕಿತ್ತು, ಬಹುಶಃ. ದುಡ್ಡಿದೆಯೆಂದು ಎಲ್ಲರನ್ನೂ ದೂರ ಮಾಡಿಕೊಂಡು ತನ್ನ ಬದುಕನ್ನು ತಾನು ಬದುಕುವ ಧೈರ್ಯ ತನಗೆ ಇರುತ್ತಿತ್ತೇ, ಬರುತ್ತಿತ್ತೇ? ಕಾಲದ ದೃಷ್ಟಿಯಿಂದ ನೋಡಿದರೆ ಅನುಮಾನ. ಕಾವೇರಿ ನಿಡಿಯುಸಿರೆಳೆದಿದ್ದಳು.

★★★

ಅವನೇನು ನೋಡಿದೊಡನೆ ಮೋಡಿ ಮಾಡುವಂತಾ ಚೆಲುವ ಚೆನ್ನಿಗನಲ್ಲ. ಸೂರೆ ಹೋಗುವಂತಾ ಸಿರಿವಂತಿಕೆ ಇಲ್ಲ. ಅವನನ್ನು ಮನೆಯ ಉಣುಗೋಲಿನೊಳಗೆ ಬಿಟ್ಟುಕೊಳ್ಳುವಾಗ ತಮ್ಮ ಮುದ್ದಿನ ಕುವರಿ ಹೀಗೊಂದು ಎಡವಟ್ಟು ಮಾಡಿಕೊಳ್ಳಬಹುದೆಂಬ ಕಿಂಚಿತ್ ಸಂದೇಹ ಕೂಡಾ ಮನೆಯವರಿಗೆ ಬಂದಿರಲಿಲ್ಲ. ಜಯ–ವಿಜಯರಂತೆ ಇಬ್ಬಿಬ್ಬರು ಅಣ್ಣಂದಿರು. ನಡುವಯಸ್ಸು ದಾಟುತ್ತಾ ಬಂದಿದ್ದರೂ ಗಟ್ಟಿಮುಟ್ಟಾಗಿದ್ದ ಹೆತ್ತವರು, ಜೊತೆಗೆ ಅಪ್ಪನ ವಯಸ್ಸಾದ ತಾಯಿ. ಯಾವ ಕೊರತೆಯೂ ಇಲ್ಲದ ಸುಖೀಕುಟುಂಬಕ್ಕೆ ಶನಿಪ್ರವೇಶವಾದಂತೆ ಅವನು ಕಾಲಿಟ್ಟಿದ್ದ ಎಂದು ಅಮ್ಮ ಬದುಕಿರುವವರೆಗೆ ಉರು ಹಾಕುತ್ತಿದ್ದಳು. ಹಳ್ಳಿಯ ಪ್ರಾಥಮಿಕ ಶಾಲೆಗೆ ಹೊಸದಾಗಿ ನೇಮಕಗೊಂಡು ಬಂದಿಳಿದವನು ಹಸಿರುಬಣ್ಣದ ದೊಡ್ಡದೊಂದು ಟ್ರಂಕು ಹಿಡಿದು ಇವರ ಮನೆಯ ಉಣುಗೋಲು ದಾಟಿ